IT in the Tier-2 Cities, my Government has identified Mangalore, Mysore, Hubli-Dharwad, Gulbarga, Belgaum and Shimoga as potential growth centers and steps have been taken to establish earth stations in these cities. To propagate the spirit of science among the masses and maintain the State's leadership, my Government has set up an Academy of Science & Technology under the Chairmanship of Prof. U.R. Rao. A Science City is proposed to be set up in Bangalore, at a cost of Rs.70 crores. Further, my Government has finalized the process of establishing a state-of-the-art Bio Tech Park in an area of over 100 acres, close to the Electronic City in Bangalore. The Park is expected to become functional by January, 2007.

64. I am glad to inform the Hon'ble Members that my Government has just finalised the State's Plan for the year 2006-07, with the Planning Commission. Appreciating the performance and the moblilisation of the resources for the successful implementation of earlier plans, the Planning Commission has approved an outlay of Rs.16,166 crores. This is a 19.26% increase over the previous years plans, and highest ever increase, since the inception of the Planning Commission.

ಕರ್ನಾಟಕ ರಾಜ್ಯದ ಜನತೆಗೆ ಸೇವೆ ಸಲ್ಲಿಸುವಲ್ಲಿ ನಿಮ್ಮ ಇಚ್ಛೆ ಮತ್ತು ಪ್ರಯತ್ನಗಳಿಗೆ ಯಶಸ್ಸು ಸಿಗಲೆಂದು ನಾನು ಹಾರೈಸುತ್ತೇನೆ. ನಮಸ್ಕಾರ.

ಜೈ ಭಾರತ್, ಜೈ ಕರ್ನಾಟಕ.

(ರಾಷ್ಟ್ರಗೀತೆಯೊಂದಿಗೆ ಸನ್ಮಾನ್ಯ ರಾಜ್ಯಪಾಲರ ಭಾಷಣ ಮುಕ್ತಾಯಗೊಂಡಿತು)

(ಸದನವು ಬೆಳಿಗ್ಗೆ 11.10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು.)

ಸದನವು ಪುನಃ ಮಧ್ಯಾಹ್ನ 3 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣರವರು ಪೀಠವನ್ನಲಂಕರಿಸಿದರು.

(3) ಕಾರ್ಯದರ್ಶಿಯವರ ವರದಿ

ಅಪರ ಕಾರ್ಯದರ್ಶಿ, ವಿ.ಸ: ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾನ್ಯ ಸದಸ್ಯರ ಮಾತುಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಸನ್ಮಾನ್ಯ ಸದಸ್ಯರೇ,

1. ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ತಮ್ಮನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ. 1947ರಲ್ಲಿ ಬಾಂಬೆ, ಮದರಾಸು, ಕೊಡಗು, ಮೈಸೂರು ಮತ್ತು ಹೈದರಾಬಾದ್ ಪ್ರಾಂತ್ಯಗಳ ಐದು ವಿವಿಧ ಆಡಳಿತಗಳಡಿಯಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕ ಏಕೀಕರಣಗೊಂಡು 50 ವರ್ಷ ಸಂದ ನೆನಪಿಗಾಗಿ ನಡೆಸುತ್ತಿರುವ ಸುವರ್ಣ ಕರ್ನಾಟಕ ಆಚರಣೆಗಳ ನಡುವೆ ನಾವೀಗ ಇದ್ದೇವೆ. ಇಂಥ ಮಹತ್ವಪೂರ್ಣ ಸಂದರ್ಭದಲ್ಲಿ, ಏಕೀಕೃತ ಕರ್ನಾಟಕದ ಬಹುದಿನದ ಕನಸನ್ನು ನನಸಾಗಿಸಲು ಹೋರಾಟ ಮತ್ತು ಬಲಿದಾನ ಮಾಡಿದ ಎಲ್ಲಾ ಪ್ರಮುಖ ವ್ಯಕ್ತಿಗಳನ್ನು ನನ್ನ ಸರ್ಕಾರ ಕೃತಜ್ಞತೆಯಿಂದ ಸ್ಮರಿಸುತ್ತದೆ.

2. ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು 20ನೇ ನವೆಂಬರ್ 2005ರಂದು ಈ ಸದನದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ್ದು ನಮ್ಮೆಲ್ಲರ ಸೌಭಾಗ್ಯ. ಘನತೆವೆತ್ತ ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ತಿಳಿಸಿದ ದೂರದೃಷ್ಟಿ ಸೂತ್ರಗಳು ಉಭಯ ಸದನಗಳಲ್ಲಿ ನಡೆಯುವ ಚರ್ಚೆಗಳಿಗೆ ಸ್ಫೂರ್ತಿ ನೀಡುತ್ತವೆ, ಇದರಿಂದ ಸರ್ಕಾರವು ದೃಢವಾದ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬ ಭರವಸೆ ನನಗಿದೆ.

3. ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ, ತಜ್ಞರು ವಿನ್ಯಾಸಗೊಳಿಸಿರುವ ಲಾಂಛನವನ್ನು ರಾಜ್ಯಕ್ಕೆ ಸಮರ್ಪಣೆ ಮಾಡಲಾಗಿರುವುದನ್ನು ನಾನು ಗೌರವಾನ್ವಿತ ಸದಸ್ಯರಿಗೆ ಸಂತಸದಿಂದ ತಿಳಿಸುತ್ತೇನೆ. ಪ್ರಾರಂಭಿಕವಾಗಿ ಹತ್ತು ಕೋಟಿ ರೂಗಳನ್ನು ಪೂರ್ವಸಿದ್ಧತೆ ಚಟುವಟಿಕೆಗಳಿಗಾಗಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಹಾಗೂ ಧಾರವಾಡ, ಶಿವಮೊಗ್ಗ ಹಾಗೂ ಉಡುಪಿಗಳಲ್ಲಿ ಸಂಕೀರ್ಣಗಳನ್ನು ನಿರ್ಮಿಸಲು ಒದಗಿಸಲಾಗಿದೆ. ಕನ್ನಡ ವೆಬ್‌ಸೈಟ್‌ನ ಉನ್ನತೀಕರಣವನ್ನು ಕಿಯೋನಿಕ್ಸ್ ಸಂಸ್ಥೆ ತೆಗೆದುಕೊಂಡಿದೆ ಹಾಗೂ ಕನ್ನಡ ಸಾಹಿತ್ಯದ ಕೀರ್ತಿಯನ್ನು ಎತ್ತಿ ತೋರಿಸುವಂತಹ ಸಾಕ್ಷ್ಯ ಕೃತಿಗಳನ್ನು ಹೊರತರಲಾಗುತ್ತಿದೆ. ಆರ್ಥಿಕವಾಗಿ ದುರ್ಬಲರಾದ ಮತ್ತು ವಯೋವೃದ್ಧ ಕಲಾವಿದರ ಮಾಸಿಕ ಪಿಂಚಣಿ ಮಂಜೂರಾತಿಗಾಗಿ ಕಳೆದ ಎರಡು ವರ್ಷಗಳಿಂದ ಬಾಕಿ ಇದ್ದ 1,645 ಅರ್ಜಿಗಳು ಪ್ರಸಕ್ತ ವರ್ಷದಲ್ಲಿ ಇತ್ಯರ್ಥಪಡಿಸಲಾಗಿದೆ. ಈ ಬಾಬ್ತು ನಾಲ್ಕು ಕೋಟಿ ರೂಗಳನ್ನು ಖರ್ಚು ಮಾಡಲಾಗಿದ್ದು, ಅಂತಹ ಒಟ್ಟಾರೆ ಫಲಾನುಭವಿಗಳ ಸಂಖ್ಯೆ 14,016 ಆಗಿರುತ್ತದೆ. ನನ್ನ ಸರ್ಕಾರವು ನವೆಂಬರ್, 2006ರಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸುತ್ತಿದೆ. ಈ ಸಂದರ್ಭದಲ್ಲಿ 100 ಜನಪ್ರಿಯ ಕನ್ನಡ ಪುಸ್ತಕಗಳನ್ನು ಮರು ಅಚ್ಚು ಮಾಡಿಸಲಾಗುವುದು ಮತ್ತು ಕನ್ನಡ ವಿಶ್ವಕೋಶವನ್ನು ಸಹ ಪ್ರಕಟಿಸಲಾಗುವುದು. ಕರ್ನಾಟಕದ ಏಕೀಕರಣಕ್ಕಾಗಿ ತಮ್ಮ ಅಮೂಲ್ಯವಾದ ಜೀವಗಳನ್ನು ಬಲಿದಾನ ಮಾಡಿದವರ ಗೌರವಾರ್ಥವಾಗಿ ಅವರ ತ್ಯಾಗವನ್ನು ಸ್ಮರಿಸುವಂತಹ ಪುಸ್ತಕಗಳನ್ನು ಹೊರತರಲಾಗುವುದು. ಪ್ರತಿ ಗ್ರಾಮದ ಸಾಂಸ್ಕೃತಿಕ ವಿಕಾಸವನ್ನು ಪ್ರತಿಬಿಂಬಿಸುವ ಗ್ರಾಮಚರಿತ ಕೋಶವೆಂಬ ವಿಶ್ವಕೋಶವನ್ನು ಹೊರತರಲಾಗುವುದು.

4. ನನ್ನ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ಶೀಘ್ರದಲ್ಲಿ ನೀಡಬೇಕೆಂಬ ಬಗ್ಗೆ ಭಾರತ ಸರ್ಕಾರಕ್ಕೆ ಸೂಕ್ತ ಸಮರ್ಥನೆಯೊಂದಿಗೆ ಮನದಟ್ಟು ಮಾಡಿಕೊಟ್ಟಿದೆ.

5. ಪ್ರಸಕ್ತ ವರ್ಷ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿ ತೃಪ್ತಿಕರವಾಗಿದೆ. ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಸುಸೂತ್ರವಾಗಿ ಮತ್ತು ಶಾಂತಿಯುತವಾಗಿ ನಡೆಸಿದ್ದಕ್ಕಾಗಿ ರಾಜ್ಯಾಡಳಿತವು ಮೆಚ್ಚುಗೆಗೆ ಪಾತ್ರವಾಗಿದೆ. ಹೆಚ್ಚುತ್ತಲೇ ಇರುವ ಬೆಂಗಳೂರು ನಗರ ಸಂಚಾರಿ ಸಮಸ್ಯೆ ನಿವಾರಿಸಲು ಮತ್ತು ನಕ್ಸಲೈಟ್ ಹಾವಳಿಯಿಂದ ಉದ್ಭವಿಸುತ್ತಿರುವ ಪರಿಸ್ಥಿತಿಯನ್ನು ನಿಭಾಯಿಸಲು ಪೋಲೀಸ್ ಪಡೆಯನ್ನು ಆಧುನಿಕ ಸಲಕರಣೆಗಳನ್ನು ಒದಗಿಸುವ ಮೂಲಕ ಬಲಪಡಿಸಿ ಸುವ್ಯವಸ್ಥೆಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಬಿದ್ದ ಹಿಂದೆಂದೂ ಕಾಣದಂತಹ ಮಳೆ ಮತ್ತು ಪ್ರವಾಹ ಪರಿಸ್ಥಿತಿಯ ಸಂದರ್ಭದಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ರಕ್ಷಣಾ ಪಡೆ ನೀಡಿದ ಅನುಕರಣೀಯ ಕೊಡುಗೆಯ ಬಗ್ಗೆ ನಾನು ಇಲ್ಲಿ ಸ್ಮರಿಸಲೇಬೇಕು.

6. ಈ ಹಿನ್ನೆಲೆಯಲ್ಲಿ, ಬೆಂಗಳೂರಿನಲ್ಲಿರುವ ಶ್ರೇಷ್ಠತೆಗೆ ಹೆಸರಾದ ಪ್ರತಿಷ್ಠಿತ ಕೇಂದ್ರವಾದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಶ್ವ ಪಾರಮ್ಯದೆಡೆಗೆ ಭಾರತವನ್ನು ಮುನ್ನಡೆಸಿದ ಚಾಂಪಿಯನ್ನರುಗಳಾದಂತಹ ನಮ್ಮ ವಿಜ್ಞಾನಿಗಳ ಮೇಲೆ ದಾಳಿ ಮಾಡಿ ಭಯೋತ್ಪಾದಕರು ಎಸಗಿದ ಹೇಯ ಕೃತ್ಯ ಒಂದು ಅನಿರೀಕ್ಷಿತ ಅಘಾತ. ಈ ದೃಷ್ಕೃತ್ಯವನ್ನು ತೀವ್ರವಾಗಿ ಖಂಡಿಸುವ ನನ್ನ ಸರ್ಕಾರ, ಈ ದುಷ್ಕೃತ್ಯವನ್ನು ಎಸಗಿದವರ ಪೈಶಾಚಿಕ ಉದ್ದೇಶಗಳನ್ನು ಮೂಲೋತ್ಪಾಟನೆ ಮಾಡಿ ಅವರನ್ನು ಆದಷ್ಟು ಬೇಗನೆ ಶಿಕ್ಷೆಗೆ ಗುರಿಪಡಿಸುವ ದೃಢ ನಿರ್ಧಾರ ಮಾಡಿದೆ. ಈ ರೀತಿಯ ಘಟನೆಗಳು ಮರುಕಳಿಸದಂತೆ ಮಾಡಲು ಎಲ್ಲಾ ಸಮಯಗಳಲ್ಲೂ ಸನ್ನದ್ಧವಾಗಿರುವಂತೆ ರಾಜ್ಯದ ಜನತೆಗೆ ನಮ್ರವಾಗಿ ಮನವಿ ಮಾಡುತ್ತೇನೆ.

7. ಈ ವರ್ಷಾವಧಿಯಲ್ಲಿ ಕರ್ನಾಟಕದ 21 ಜಿಲ್ಲೆಗಳಲ್ಲಿ ಹಿಂದೆಂದೂ ಕಂಡರಿಯದ ಪ್ರವಾಹ ಪರಿಸ್ಥಿತಿ ಎದುರಾಯಿತು. ಇದರಿಂದ 1,315 ಹಳ್ಳಿಗಳು ತೊಂದರೆಗೊಳಗಾದವು ಹಾಗೂ 130 ಜನರು ಅಸುನೀಗಿದರು. 88,548 ಮನೆಗಳು ನಾಶವಾದವು, 11,601 ಜಾನುವಾರುಗಳು ಸಾವಿಗೀಡಾದವು ಮತ್ತು 2 ಲಕ್ಷ ಹೆಕ್ಟೇರ್‌ಗಳಷ್ಟು ಭೂಮಿಯಲ್ಲಿ ಬೆಳೆದಿದ್ದ ಬೆಳೆ ನಷ್ಟವಾಯಿತು. ಇದರ ಪರಿಣಾಮವಾಗಿ ಸುಮಾರು 30 ಲಕ್ಷ ಕುಟುಂಬಗಳಿಗೆ ತೊಂದರೆಯುಂಟಾಯಿತು. ತೀವ್ರ ಹಾನಿಗೊಳಗಾದ ಜಿಲ್ಲೆಗಳ ಜನರಿಗೆ ಪರಿಣಾಮಕಾರಿಯಾಗಿ ಪರಿಹಾರವನ್ನು ಒದಗಿಸಲಾಯಿತು.

8. ಭಾರತ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ (ಸಿಆರ್‌ಎಫ್) ಮತ್ತು ರಾಷ್ಟ್ರೀಯ ಪ್ರಕೃತಿ ವಿಕೋಪ ಸಂಚಿತ ನಿಧಿ (ಎನ್‌ಸಿಸಿಎಫ್) ಅಡಿಯಲ್ಲಿ ಬಿಡುಗಡೆ ಮಾಡಿದ 444 ಕೋಟಿ ರೂಗಳನ್ನು ರಾಜ್ಯವು ಉಪಯೋಗಿಸಿಕೊಂಡಿರುವುದರ ಜೊತೆಗೆ ರೂ. 106 ಕೋಟಿಗಳಷ್ಟು ಹಣವನ್ನು ರಾಜ್ಯದ ಹಣದಿಂದ ಈ ಉದ್ದೇಶಕ್ಕಾಗಿ ಬಿಡುಗಡೆ ಸಹ ಮಾಡಿದೆ. ಭಾರತ ಸರ್ಕಾರವು 72 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದೆ. ಬೆಂಗಳೂರು ನಗರ ಮತ್ತು ಆಸುಪಾಸಿನ ಏಳು ನಗರಸಭೆಗಳಲ್ಲಿನ ತೀವ್ರ ಬಾಧಿತ ಪ್ರದೇಶಗಳಲ್ಲಿ ಪರಿಹಾರ ಹಾಗೂ ರಕ್ಷಣಾ ಕಾರ್ಯಗಳಿಗೆ ರೂ.40 ಕೋಟಿಗಳನ್ನು ಬಿಡುಗಡೆ ಮಾಡಿದೆ. ನೆರೆಪೀಡಿತರಿಗಾಗಿ ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ 10,000 ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಪ್ರಕೃತಿ

ವಿಕೋಪಗಳ ಪರಿಣಾಮಕಾರಿ ನಿರ್ವಹಣೆಗಾಗಿ ನನ್ನ ಸರ್ಕಾರವು ರಾಜ್ಯ ಮಟ್ಟದ : ಜಿಲ್ಲಾ ಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ರಚಿಸಿದೆ.

9. ಸುನಾಮಿ ಸಂತ್ರಸ್ತರಿಗಾಗಿ ಸಾಕಷ್ಟು ಪರಿಹಾರ ಸಾಮಗ್ರಿಗಳನ್ನು ಕ್ರೋಢೀಕರಿಸಿ ಕಳುಹಿಸುವಲ್ಲಿ ನನ್ನ ಸರ್ಕಾರವು ಮುಂಚೂಣಿಯಲ್ಲಿತ್ತೆಂದು ಗೌರವಾನ್ವಿತ ಸದಸ್ಯರುಗಳಿಗೆ ತಿಳಿಸಲು ಹರ್ಷವಾಗುತ್ತದೆ.

10. ಸ್ವಾಭಾವಿಕ ವಿಪತ್ತುಗಳ ಮೇಲ್ವಿಚಾರಣೆಗಾಗಿ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ಬರ ಮೇಲ್ವಿಚಾರಣಾ ಕೋಶವನ್ನು ಸ್ಥಾಪಿಸಲಾಗಿದೆ.

11. ನನ್ನ ಸರ್ಕಾರವು, ಅಭಿವೃದ್ಧಿ ಹಾಗೂ ನಿಯಂತ್ರಣ ಕಾರ್ಯಕ್ರಮಗಳ ಸಮನ್ವಯ, ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದ ಹಿಂದಿನ ಕಂದಾಯ ವಿಭಾಗಗಳಲ್ಲಿ ಪ್ರಾದೇಶಿಕ ಆಯುಕ್ತರ ಕಚೇರಿಗಳನ್ನು ಸೃಜಿಸಿದೆ.

12. ಕೃಷಿ ವಲಯದಲ್ಲಿ ದ್ವಿತೀಯ ಹಸಿರು ಕ್ರಾಂತಿಯಾಗಬೇಕೆಂದು 93ನೇ ವಿಜ್ಞಾನ ಸಮ್ಮೇಳನದಲ್ಲಿ ಪ್ರತಿಪಾದಿಸಿದ ಪ್ರಧಾನಮಂತ್ರಿಯವರ ದೃಷ್ಟಿಕೋನವನ್ನು ನನ್ನ ಸರ್ಕಾರ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಇದರಿಂದ ನಮ್ಮ ದೇಶ ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಬಹುದು. ಕರ್ನಾಟಕವು ಸಹ ಈ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಪ್ರಾರಂಭಿಸಿದೆ. ಕಳೆದ ಮೂರು ವರ್ಷಗಳಿಂದ ಸತತವಾಗಿ ಕ್ಷಾಮಕ್ಕೆ ತುತ್ತಾಗಿರುವ ರಾಜ್ಯದ ರೈತರಿಗೆ ಸಹಾಯ ನೀಡುವ ಸಲುವಾಗಿ 31ನೇ ಮಾರ್ಚ್ 2004ರಂದು ಬಾಕಿ ಇದ್ದ ಕೃಷಿ ಹಾಗೂ ಕೃಷಿ ಸಂಬಂಧಿ ಸಾಲಗಳ ಮೇಲಿನ ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಸರ್ಕಾರವು ಮನ್ನಾ ಮಾಡಿದೆ. ಈ ಸೌಲಭ್ಯ ಪಡೆಯಲು ರೈತರು 1ನೇ ಮಾರ್ಚ 2005 ರಿಂದ 30ನೇ ಸೆಪ್ಟೆಂಬರ್ 2005ರ ಅವಧಿಯಲ್ಲಿ ಕೃಷಿ ಸಾಲ ಸಂಸ್ಥೆಗಳಿಗೆ ಅಸಲನ್ನು ಮರು ಸಂದಾಯ ಮಾಡಿರಬೇಕು. ಸರ್ಕಾರವು ಸುಮಾರು 1000 ಕೋಟಿ ರೂಪಾಯಿಗಳನ್ನು ಸಹಾಯ ಧನವನ್ನಾಗಿ ಮರುಪಾವತಿ ಮಾಡುತ್ತಿದೆ. ಈ ಕ್ರಮದಿಂದಾಗಿ ವಸೂಲಾತಿಯು ರೂ. 1,650 ಕೋಟಿಗಳಷ್ಟಾಗಿದ್ದು, ಸಹಕಾರಿ ಸಂಸ್ಥೆಗಳ ಸಾಲ ನೀಡುವಿಕೆ ಸಾಮರ್ಥ್ಯವನ್ನು ಪುನರ್‌ಸ್ಥಾಪಿಸಿದಂತಾಗಿದೆ. ಇದರಿಂದ ಹತ್ತು ಲಕ್ಷ ಕುಟುಂಬಗಳಿಗೆ ಸಹಾಯವಾಗಿದೆ. ನನ್ನ ಸರ್ಕಾರವು ನೇಕಾರರಿಗೆ ಹಾಗೂ ಬೆಸ್ತರಿಗೆ ಇಂಥವೇ ಸೌಲಭ್ಯಗಳನ್ನು ವಿಸ್ತರಿಸಿದೆ.

13. ನನ್ನ ಸರ್ಕಾರವು, ರೈತರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರೊಂದಿಗೆ ಮುಂದಿನ ಹತ್ತು ವರ್ಷಗಳಲ್ಲಿ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದಕ್ಕೆ ಬದ್ಧವಾಗಿದೆ. ನನ್ನ ಸರ್ಕಾರವು ಸಹಕಾರಿ ಸಾಲವನ್ನು ಶೇಕಡ 6ರಂತೆ ರಿಯಾಯಿತಿ ದರದಲ್ಲಿ ನೀಡುವುದನ್ನು ಮುಂದುವರೆಸಲಿದೆ. 10.5 ಲಕ್ಷ ಕೃಷಿ ಕುಟುಂಬಗಳಿಗೆ ಅನುಕೂಲವಾಗಿದೆ. ನವೆಂಬರ್ 2005ರಲ್ಲಿ ವಿತರಿಸಿದ ಸಾಲದ ಮೊತ್ತ ರೂ.2000 ಕೋಟಿಗಳು. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಪಡಿಸುವ ಸಲುವಾಗಿ ಒಂದು ಪ್ಲೋರ್ ಪ್ರೈಸ್ ಯೋಜನೆಯನ್ನು ಪ್ರಾರಂಭಿಸಿದ್ದು, ಅದಕ್ಕಾಗಿ ರೂ. 192 ಕೋಟಿಗಳ ಕಾರ್ಪಸ್ ಆವರ್ತ ನಿಧಿಯನ್ನು ಸ್ಥಾಪಿಸಲಾಗಿದೆ. ನನ್ನ ಸರ್ಕಾರವು ಸುಮಾರು 2.5 ಲಕ್ಷ ಕೃಷಿ ಕಾರ್ಮಿಕರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ನಿರಾಶ್ರಿತರಿಗೆ ಒಂದು ಆರೋಗ್ಯ ವಿಮೆ (ಆಪತ್ಬಾಂಧವ) ಕಾರ್ಯಕ್ರಮವನ್ನು ಸಹ ರೂಪಿಸುತ್ತಿದೆ. ಕರ್ನಾಟಕವು ಸಾವಯವ ಕೃಷಿ ನೀತಿಯನ್ನು ರೂಪಿಸಿದ ಮೊದಲ ರಾಜ್ಯವಾಗಿದೆ.

14. ಇಪ್ಪತ್ತು ಲಕ್ಷ ಹೆಕ್ಟೇರುಗಳಷ್ಟು ಖುಷ್ಕಿ ಭೂಮಿಯನ್ನು ಅಭಿವೃದ್ಧಿಪಡಿಸಲು ಹಲವು ಕಾರ್ಯಕ್ರಮಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಯು ರೂಪಿಸಿದೆ.

15. ತೋಟಗಾರಿಕಾ ಕ್ಷೇತ್ರದಲ್ಲಿ ಕರ್ನಾಟಕವು ದೇಶದಲ್ಲಿಯೇ ವಿಶಿಷ್ಟ ಸ್ಥಾನ ಪಡೆದು ಮುಂದುವರಿದಿದೆ. ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಪ್ರದೇಶವನ್ನು ಮತ್ತು ಆ ಬೆಳೆಗಳ ಉತ್ಪಾದಕತೆ, ಸಂಸ್ಕರಣೆ ಮತ್ತು ರಫ್ತನ್ನು ಹೆಚ್ಚಿಸುವ ಗುರಿ ಹೊಂದಿರುವ ಹನಿ ನೀರಾವರಿ, ಜೈವಿಕ ತಂತ್ರಜ್ಞಾನ ಮತ್ತು ಸಾವಯವ ಕೃಷಿಗೆ ಸಹ ನಾವು ಉತ್ತೇಜನ ನೀಡುತ್ತಿದ್ದೇವೆ.

16. ಭಾರತ ಸರ್ಕಾರವು ಕರ್ನಾಟಕದ ತೋಟಗಾರಿಕೆ ಮಿಷನ್‌ಗೆ ಅನುಮೋದನೆ ನೀಡಿರುವ ವಿಷಯವನ್ನು ನನ್ನ ಸರ್ಕಾರ ಮಾನ್ಯ ಸದಸ್ಯರುಗಳಿಗೆ ಸಂತೋಷದಿಂದ ತಿಳಿಸುತ್ತದೆ. 2005–06ನೇ ಸಾಲಿಗೆ 85 ಕೋಟಿ ರೂ.ಗಳ ಮೊತ್ತವನ್ನು ಇದಕ್ಕಾಗಿ ಮೀಸಲಿಟ್ಟಿದ್ದು, ಪ್ರಾರಂಭಿಕವಾಗಿ 11 ಜಿಲ್ಲೆಗಳನ್ನು ಇದರ ವ್ಯಾಪ್ತಿಗೆ ತರಲಾಗಿದೆ.

17. ರಾಜ್ಯದಲ್ಲಿನ ಜಾನುವಾರುಗಳ ಆರೋಗ್ಯ ಪಾಲನೆಗೆ ಗಮನ ನೀಡುವ ಮತ್ತು ಪ್ರಾಣಿಗಳಿಗೆ ತಗಲುವ ಸೋಂಕು ರೋಗಗಳನ್ನು ತಡೆಗಟ್ಟುವ ಸಲುವಾಗಿ, ರೇಬಿಸ್ ನಿರೋಧಕ ಲಸಿಕೆಯನ್ನು ಹೊರತುಪಡಿಸಿ, ಉಳಿದ ಎಲ್ಲ ಲಸಿಕೆಗಳನ್ನು ನನ್ನ ಸರ್ಕಾರ ಉಚಿತವಾಗಿ ಸರಬರಾಜು ಮಾಡಿದೆ.

18. ನನ್ನ ಸರ್ಕಾರವು ಕರ್ನಾಟಕದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸಲು ಬದ್ಧವಾಗಿದೆ. ಅದರಂತೆ, ಪಂಚಾಯತ್ ರಾಜ್ ಸಂಸ್ಥೆಗಳ ಯೋಜನಾ ವೆಚ್ಚ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 123ರಷ್ಟು ಹೆಚ್ಚಿದೆ ಮತ್ತು ಗ್ರಾಮ ಪಂಚಾಯತಿಗಳ ಯೋಜನಾ ವೆಚ್ಚ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 218ರಷ್ಟು ಹೆಚ್ಚಾಗಿದೆ. ಪ್ರಸಕ್ತ ವರ್ಷದಲ್ಲಿ ಇದು 1589 ಕೋಟಿ ರೂ.ಗಳಷ್ಟು ಇದೆ.

19. ನನ್ನ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ರೂಪಿಸುವ ಕಾರ್ಯದಲ್ಲಿ ಸಹ ನಿರತವಾಗಿದೆ. ಹಣಕಾಸು ಮತ್ತು ಕಾರ್ಯನಿರ್ವಹಣಾ ಸಿಬ್ಬಂದಿ ಸೌಲಭ್ಯವನ್ನು ನಿರ್ದಿಷ್ಟವಾದ ಮೇಲ್ವಿಚಾರಣಾ ಅಧಿಕಾರದೊಂದಿಗೆ ನೀಡಲಾಗಿದೆ. ನನ್ನ ಸರ್ಕಾರವು, ತಾಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಮೇಲ್ವಿಚಾರಣೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣೆ ಪ್ರಕಾರ್ಯಗಳನ್ನು ಮತ್ತು ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ನಿರ್ವಹಿಸಿಕೊಂಡು ಹೋಗಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡಿದೆ. ಇಂದಿರಾ ಆವಾಸ್ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಪ್ರತಿ ಪಂಚಾಯಿತಿಗೆ ವಹಿಸಿದ್ದು, ಇದಕ್ಕೆ ಬೇಕಾದ ಹಣವನ್ನು ಒದಗಿಸಲಾಗಿದೆ. ಈ ಕಾರ್ಯಕ್ರಮದ ಒಂದು ಮುಖ್ಯವಾದ ಘಟಕಾಂಶವೆಂದರೆ ಉಪಗ್ರಹದ ಮೂಲಕ ತರಬೇತಿಯನ್ನು ನೀಡುವುದು. ಗ್ರಾಮ ಪಂಚಾಯತಿಯ ಸದಸ್ಯರು ಈಗ ಕುವೆಂಪು ವಿಶ್ವವಿದ್ಯಾಲಯದ ಮೂಲಕ ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸ್ ಮಾಡುವ ಸೌಲಭ್ಯವನ್ನು ಹೊಂದಲಿದ್ದಾರೆ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸಲು ನಾವು ತೆಗೆದುಕೊಂಡಿರುವ ಕ್ರಮಗಳನ್ನು ಗುರುತಿಸಿ, ಭಾರತ ಸರ್ಕಾರವು ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ, ನಮ್ಮ ರಾಜ್ಯವನ್ನು ಎರಡನೆಯ ಅತ್ಯುತ್ತಮ ರಾಜ್ಯವೆಂದು ಶ್ಲಾಘಿಸಿದೆ.

20. ನನ್ನ ಸರ್ಕಾರವು, ಕುಡಿಯುವ ನೀರಿನ ಸಮಸ್ಯೆಯನ್ನು ದಕ್ಷತೆಯಿಂದ ನಿಭಾಯಿಸಿದೆ. ಮುಂದಿನ ಒಂದು ವರ್ಷದೊಳಗಾಗಿ ಪ್ರತಿಯೊಂದು ವಸತಿ ಪ್ರದೇಶಕ್ಕೆ ದಿನಂಪ್ರತಿ ತಲಾ ಕನಿಷ್ಠ 40 ಲೀಟರ್‌ಗಳಂತೆ (ಎಲ್‌ಪಿಸಿಡಿ) ಕುಡಿಯುವ ನೀರನ್ನು ಒದಗಿಸಲಾಗುವುದು.

21. ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಆದೇಶದಂತೆ 2007ರ ವೇಳೆಗೆ ಅರಣ್ಯ ಮತ್ತು ಮರಗಳಿಂದ ಆವೃತವಾದ ಪ್ರದೇಶವನ್ನು ರಕ್ಷಿಸಲು ಮತ್ತು ಅದನ್ನು ಭೂ ಪ್ರದೇಶದ ಶೇ. 21 ರಿಂದ 25ಕ್ಕೆ ಹೆಚ್ಚಿಸಲು ನನ್ನ ಸರ್ಕಾರ ಬದ್ಧವಾಗಿದೆ.

22. ನನ್ನ ಸರ್ಕಾರವು 12 ವರ್ಷಗಳಿಗೊಮ್ಮೆ ಶ್ರವಣಬೆಳಗೊಳದಲ್ಲಿ ನಡೆಯುವ ಅಂತರಾಷ್ಟ್ರೀಯ ಪ್ರಾಮುಖ್ಯತೆಯ ಮಹಾಮಸ್ತಕಾಭಿಷೇಕವನ್ನು ಯೋಗ್ಯ ರೀತಿಯಲ್ಲಿ ಆಚರಿಸಲು ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸಿದೆ.

23. ನನ್ನ ಸರ್ಕಾರವು, ಯುವಜನರ ಸಾಮರ್ಥ್ಯವನ್ನು ಕ್ರೀಡೆಗಳಂಥ ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಲು ಗ್ರಾಮ ಪಂಚಾಯಿತಿಗಳಲ್ಲಿ ರಾಜೀವ್ ಗಾಂಧಿ ಯುವ ಶಕ್ತಿ ಸಂಘಗಳನ್ನು ಸಂಘಟಿಸಿದೆ.

24. ಪುನಶ್ಚೇತನ ಸಾಮರ್ಥ್ಯವಿರುವ ಕಾರ್ಖಾನೆಗಳ ಬಾಕಿಯಿರುವ ಸಾಲಗಳನ್ನು ಮರು ವ್ಯವಸ್ಥೆಗೊಳಿಸಿ, ಬಡ್ಡಿಯ ಹೊರೆಯನ್ನು ಕಡಿಮೆ ಮಾಡುವ ಮೂಲಕ ಹಾಗೂ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮಂಡಳಿ (ಎನ್‌ಸಿಡಿಸಿ)ಯಿಂದ ರಿಯಾಯಿತಿ ಬಡ್ಡಿದರದಲ್ಲಿ 100 ಕೋಟಿ ರೂ.ಗಳ ಚಾಲ್ತಿ ಬಂಡವಾಳವನ್ನು ಪಡೆಯುವ ಮೂಲಕ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಸನ್ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ.

25. ನನ್ನ ಸರ್ಕಾರವು 119 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಯಶಸ್ವಿಯಾಗಿ ಚುನಾವಣೆಗಳನ್ನು ನಡೆಸಿದೆ ಎಂದು ತಿಳಿಸಲು ನನಗೆ ಸಂತೋಷವನಿಸುತ್ತದೆ.

26. ನನ್ನ ಸರ್ಕಾರವು, ಸರ್ಕಾರದಿಂದ ನಾಗರೀಕರಿಗೆ (ಜಿ2ಸಿ), ವ್ಯವಹಾರ ಸಂಸ್ಥೆಗಳಿಂದ ನಾಗರೀಕರಿಗೆ (ಬಿ2ಸಿ), ಹಾಗೂ ವ್ಯವಹಾರದಿಂದ ವ್ಯವಹಾರಕ್ಕೆ (ಬಿ2ಬಿ) ಎಂಬ ಸೇವೆಗಳನ್ನು ಒದಗಿಸುವ ಸಲುವಾಗಿ "ಬೆಂಗಳೂರು ಒನ್" ಎಂಬ ಯೋಜನೆಯಡಿಯಲ್ಲಿ ಸಮಗ್ರ ನಾಗರೀಕ ಕೇಂದ್ರಗಳನ್ನು ಸ್ಥಾಪಿಸಿದೆ. ಇದೇ ಸೌಲಭ್ಯವನ್ನು ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಳಗಾಂ ಹಾಗೂ ಮಂಗಳೂರುಗಳಂಥ ಕೆಲವು ಪ್ರಮುಖ ನಗರಗಳಿಗೆ ವಿಸ್ತರಿಸಲಾಗುವುದು.

27. ಮಾಹಿತಿ ತಂತ್ರಜ್ಞಾನ ವಲಯವು ನಾಗರೀಕರ ಬದುಕಿನಲ್ಲಿ ಕ್ರಾಂತಿಯನ್ನು ತಂದಿದ್ದರೂ, ಸಂಪರ್ಕ ವ್ಯವಸ್ಥೆ ಒಂದು ಬಹು ದೊಡ್ಡ ಸಮಸ್ಯೆಯಾಗಿಯೇ ಉಳಿದಿದ್ದು ಗ್ರಾಮೀಣ ಮತ್ತು ನಗರ ಸಮುದಾಯಗಳ ನಡುವೆ ಗೋಚರಿಸುವಂತಹ ಅಂತರ ಉಂಟು ಮಾಡಿದೆ. ಈಗ ಭಾರತ ಸರ್ಕಾರದ ನೆರವಿನೊಂದಿಗೆ, ರಾಜ್ಯದಾದ್ಯಂತ ವ್ಯಾಪಕ ಪ್ರದೇಶ ಜಾಲವನ್ನು (ವೈಡ್ ಏರಿಯಾ ನೆಟ್‌ವರ್ಕ್) ಸ್ಥಾಪಿಸಲಾಗುವುದು. ಸರ್ಕಾರದ ಸೇವೆಗಳು ಗ್ರಾಮ ಮಟ್ಟದಲ್ಲಿನ ಶ್ರೀಸಾಮಾನ್ಯನಿಗೂ ಲಭ್ಯವಾಗುವಂತೆ ಮಾಡುವ ದೃಷ್ಟಿಯಿಂದ ಪ್ರಸಕ್ತ ವರ್ಷದಲ್ಲಿ ಸಾರ್ವಜನಿಕ – ಖಾಸಗಿ ಪಾಲುದಾರಿಕೆಯಲ್ಲಿ 800 ಗ್ರಾಮೀಣ ದೂರ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

28. ಕ್ರಾಂತಿಕಾರಕವಾದ, ಮಾಹಿತಿ ಹಕ್ಕು ಅಧಿನಿಯಮ, 2005ನ್ನು ಜಾರಿಗೊಳಿಸಿದ್ದಕ್ಕೆ ನಾನು ಭಾರತ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಅಧಿನಿಯಮದ ಅನುಷ್ಠಾನವು ಪ್ರಜ್ಞಾವಂತ ನಾಗರೀಕತ್ವವನ್ನು ಸೃಜಿಸುವುದರಲ್ಲಿ ಮಹತ್ವದ್ದಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಗ್ರಹಿಸುವರೆಂದು ಭಾವಿಸುತ್ತೇನೆ. ಸದರಿ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಿಯಮಗಳನ್ನು ಪ್ರಕಟಿಸಲು ಮತ್ತು ಕರ್ತವ್ಯಾಧಿಕಾರಿಗಳನ್ನು ನೇಮಿಸಲು ಕ್ರಮ ಕೈಗೊಂಡಿದೆ ಎಂದು ತಿಳಿಸಲು ನನಗೆ ಹರ್ಷವೆನಿಸುತ್ತದೆ.

29. ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಣೆ ಮಾಡಿ ಹೊಸ ವೇತನ ಸ್ವರೂಪವನ್ನು ರೂಪಿಸಲು ಐದನೇ ರಾಜ್ಯ ವೇತನ ಆಯೋಗವನ್ನು ನನ್ನ ಸರ್ಕಾರವು ರಚಿಸಿದೆ.

30. ಆರ್ಥಿಕ ಕ್ಷೇತ್ರದಲ್ಲಿ, ರಾಜ್ಯವು ಆರ್ಥಿಕ ಕ್ರೋಢೀಕರಣದ ಪಥದಲ್ಲಿ ನಿರಂತರವಾಗಿ ಸಾಗುತ್ತಿದೆ. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಡಿಯಲ್ಲಿ ಪ್ರಸ್ತುತ ವರ್ಷವು ಗುರಿ ಸಾಧನೆಯ ವರ್ಷವಾಗಿರುವುದರಿಂದ, ಈ ಅಧಿನಿಯಮದಲ್ಲಿ ನಿಗದಿಪಡಿಸಲಾದ ಗುರಿಗಳನ್ನು ಸಾಧಿಸಬೇಕಾದ ದೃಷ್ಟಿಯಿಂದ ಆರ್ಥಿಕ ಸಾಧನೆಗೆ ಅತ್ಯಂತ ಹೆಚ್ಚು ಮಹತ್ವ ಬಂದಿದೆ. ಪ್ರಸ್ತುತ ವರ್ಷದಲ್ಲಿ ರಾಜಸ್ವ ಕೊರತೆಯನ್ನು ಸಂಪೂರ್ಣವಾಗಿ ಅಳಿಸಿ ಹಾಕುವ ಹಾಗೂ ಆರ್ಥಿಕ ಕೊರತೆಯನ್ನು ಒಟ್ಟು ರಾಜ್ಯ ಆಂತರಿಕ ಉತ್ಪನ್ನದ ಶೇ. 3ಕ್ಕಿಂತ ಕಡಿಮೆ ಮಟ್ಟದಲ್ಲಿಟ್ಟುಕೊಂಡು ಬರಬೇಕಾದ ಗುರಿಯನ್ನು ಸಾಧಿಸುವ ಉದ್ದೇಶವನ್ನು ರಾಜ್ಯವು ಹೊಂದಿದೆ.

31. ರಾಜ್ಯವು ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪದ್ಧತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಹಾಗೂ ಸಣ್ಣಪಟ್ಟ ಆರಂಭಿಕ ತೊಂದರೆಗಳಿದ್ದಾಗ್ಯೂ ಮುಂದಿನ ಕೆಲವು ವರ್ಷಗಳಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿ ಸುಸ್ಥಿರಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿದೆ.

32. ನನ್ನ ಸರ್ಕಾರವು ಸಣ್ಣ ನೀರಾವರಿ ಕಾಮಗಾರಿಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಬರಪೀಡಿತ ಪ್ರದೇಶಗಳಲ್ಲಿ, ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದೆ. 2005–06ನೇ ಸಾಲಿನಲ್ಲಿ ಈ ಕಾಮಗಾರಿಗಳಿಗೆ 175 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಪ್ರಸ್ತುತ, 45,000 ಹೆಕ್ಟೇರುಗಳಷ್ಟು ನೀರಾವರಿ ಸಾಮರ್ಥ್ಯವನ್ನು ಸೃಜಿಸುವ 660 ಕಾಮಗಾರಿಗಳು ಮುಕ್ತಾಯದ ವಿವಿಧ ಹಂತಗಳಲ್ಲಿವೆ.

33. ನನ್ನ ಸರ್ಕಾರವು "ರಾಷ್ಟ್ರೀಯ ಜಲ ಕಾಯಗಳ ದುರಸ್ತಿ, ನವೀಕರಣ ಮತ್ತು ಜೀರ್ಣೋದ್ಧಾರ" ಎಂಬ ಕೇಂದ್ರ ಪುರಸ್ಕೃತ ಯೋಜನೆಯನ್ನು 73 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಂಡಿದೆ. ಈ ಯೋಜನೆಯಡಿ ಗುಲ್ಬರ್ಗಾ ಜಿಲ್ಲೆಯಲ್ಲಿ 117 ಕೆರೆಗಳನ್ನು ಹಾಗೂ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ 182 ಕೆರೆಗಳನ್ನು ಸಮಗ್ರವಾಗಿ ಜೀರ್ಣೋದ್ಧಾರ ಮಾಡಲಾಗುವುದು.

34. ಜಲ ಸಂವರ್ಧನಾ ಯೋಜನೆ ವಿಶ್ವಬ್ಯಾಂಕ್ ನೆರವಿನ ಒಂದು ಮಾದರಿ ಯೋಜನೆಯಾಗಿದ್ದು, 2005 ಕೆರೆಗಳನ್ನು ಅಭಿವೃದ್ಧಿಗೊಳಿಸಲು 509 ಕೋಟಿ ರೂ.ಗಳ ವೆಚ್ಚದಲ್ಲಿ ನನ್ನ ಸರ್ಕಾರ ಕೈಗೆತ್ತಿಕೊಂಡಿದ್ದು, ಇದರಿಂದ 70,000 ಹೆಕ್ಟೇರು ಭೂಮಿಗೆ ಸಬ್ಸಿಡೈಸ್ಡ್ ನೀರಾವರಿ ಸಾಮರ್ಥ್ಯ ಖಾತರಿಗೊಳಿಸುತ್ತದೆ. ಈ ಪ್ರಯತ್ನವನ್ನು ಮಾನ್ಯ ಪ್ರಧಾನ ಮಂತ್ರಿಯವರು ಶ್ಲಾಘಿಸಿದ್ದಾರೆ.

35. ನನ್ನ ಸರ್ಕಾರವು ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಪ್ರಗತಿಯಲ್ಲಿರುವ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತದೆ. ನನ್ನ ಸರ್ಕಾರವು ವಚನ ನೀಡಿದ್ದಂತೆ, ಬೆಣ್ಣೆತೊರ, ಗಂಡೋರಿ ನಾಲಾ

ಮತ್ತು ಕೆಳ ಮುಲ್ಲಾಮರಿ ಯೋಜನೆಗಳಿಂದ ನೀರಾವರಿಗಾಗಿ ನೀರನ್ನು ಬಿಡುಗಡೆ ಮಾಡಿದೆ. ಇನ್ನೆರಡು ಯೋಜನೆಗಳಾದ ಹರಿನಾಲಾ ಮತ್ತು ಮಾರ್ಕಂಡೇಯ ಯೋಜನೆಗಳು ಕಾರ್ಯಾರಂಭಕ್ಕೆ ಸಿದ್ಧವಾಗಿವೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ, ಮುಲ್ವಾಡ ಮತ್ತು ಇಂಡಿ ಏತ ನೀರಾವರಿಯ ಯೋಜನೆಗಳು ಪ್ರಮುಖ ಅಂಶಗಳಾಗಿದ್ದು, ಇವುಗಳಿಂದ ನೀರಾವರಿಯು ಶೀಘ್ರದಲ್ಲೇ ಪ್ರಾರಂಭವಾಗುತ್ತದೆ. ಕಳೆದ 33 ವರ್ಷಗಳಿಂದ ನೆನೆಗುದಿಯಲ್ಲಿದ್ದ ಕಾರಂಜಿ ಯೋಜನೆಯನ್ನು ಪೂರ್ಣಗೊಳಿಸಲು ಸಕಲ ಪ್ರಯತ್ನಗಳನ್ನು ಮಾಡಲಾಯಿತು. ಈ ಯೋಜನೆಯ ವೆಚ್ಚವು 9 ಕೋಟಿ ರೂ.ಗಳಿಂದ ಸುಮಾರು 400 ಕೋಟಿ ರೂ.ಗಳಿಗೆ ಹೆಚ್ಚಳಗೊಂಡಿದ್ದು, ಈಗ ಅದು ಕಾರ್ಯಾರಂಭ ಮಾಡಲು ಸಿದ್ಧವಾಗಿದೆ.

36. ನೀರಾವರಿಗಾಗಿ ಲಭ್ಯವಿರುವ ನೀರಿನ ಅತ್ಯುತ್ತಮ ನಿರ್ವಹಣೆಯಾಗುವಂತೆ, ವಿಶೇಷವಾಗಿ ಯಾರ ಭೂಮಿಗಳು ಕೊನೆಯಲ್ಲಿವೆಯೋ ಆ ರೈತರ ಜಮೀನುಗಳಿಗೆ ನೀರು ದೊರೆಯುವಂತೆ ನೋಡಿಕೊಳ್ಳಲು ನನ್ನ ಸರ್ಕಾರ ನಿರ್ಣಯಿಸಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ದುರಸ್ತಿ ಮತ್ತು ಜೀರ್ಣೋದ್ಧಾರ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕಾವೇರಿ ನೀರಾವರಿ ನಿಗಮವನ್ನು ಸ್ಥಾಪಿಸಲಾಗಿದೆ.

37. ನನ್ನ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಪ್ರಯೋಜನಕ್ಕಾಗಿ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಇದೇ ಮೊದಲ ಬಾರಿಗೆ ನೀರಾವರಿ ನಿಗಮಗಳಿಂದ ಹಣವನ್ನು ಪ್ರತ್ಯೇಕವಾಗಿ ತೆಗೆದಿರಿಸಿದೆ ಎಂಬ ಸಂಗತಿಯನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. 3 ವರ್ಷಗಳಲ್ಲಿ ಹಂಚಿಕೆ ಮಾಡಲಾಗುವ 100 ಕೋಟಿ ರೂ.ಗಳ ವೆಚ್ಚದಿಂದ 10,000 ಕುಟುಂಬಗಳಿಗೆ ಪ್ರಯೋಜನವಾಗುವ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇದರಿಂದ 15,000 ಹೆಕ್ಟೇರುಗಳ ಹೆಚ್ಚುವರಿ ನೀರಾವರಿ ಸಾಮರ್ಥ್ಯ ಸೃಜನೆಯಾಗುತ್ತದೆ. ಈ ಫಲಾನುಭವಿಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಗುರುತಿಸುತ್ತದೆ ಮತ್ತು ನಿಗಮಗಳು ಟರ್ನ್-ಕೀ ಆಧಾರದ ಮೇಲೆ ಅನುಷ್ಠಾನಗೊಳಿಸುತ್ತವೆ.

38. ನನ್ನ ಸರ್ಕಾರವು ಆಹಾರ ವಿತರಣಾ ಪದ್ಧತಿಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವುದಕ್ಕಾಗಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಚಟುವಟಿಕೆಗಳನ್ನು ಗಣಕೀಕರಣಗೊಳಿಸಲು ಬದ್ಧವಾಗಿದೆ.

39. ರೂ.1,272 ಕೋಟಿಗಳ ಅಂದಾಜು ವೆಚ್ಚದಲ್ಲಿ, ಕರ್ನಾಟಕ ಪುರಸಭಾ ಸುಧಾರಣಾ ಯೋಜನೆ (ಕೆಎಂಆರ್‌ಪಿ) ಅಡಿಯಲ್ಲಿ 50 ಪಟ್ಟಣಗಳಲ್ಲಿ ನಗರ ಮೂಲಭೂತ ಸೌಕರ್ಯಗಳನ್ನು ಸುಧಾರಣೆ ಮಾಡುವ ನಮ್ಮ ಯೋಜನೆಗೆ ವಿಶ್ವಬ್ಯಾಂಕ್ ಅನುಮೋದನೆ ನೀಡಿದೆ. ಮೊದಲ ಹಂತದಲ್ಲಿ 17 ಪಟ್ಟಣಗಳನ್ನು ಗುರುತಿಸಲಾಗಿದೆ. ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮದ (ಎನ್‌ಕೆಯುಎಸ್‌ಐಪಿ) ಅಡಿಯಲ್ಲಿ 25 ಪಟ್ಟಣಗಳಲ್ಲಿ ನಗರ ಮೂಲಭೂತ ಸೌಕರ್ಯಗಳನ್ನು ಸುಧಾರಣೆ ಮಾಡಲು, ಏಷಿಯಾ ಅಭಿವೃದ್ಧಿ ಬ್ಯಾಂಕ್‌ನ ನೆರವಿನೊಂದಿಗೆ 1800 ಕೋಟಿ ರೂ.ಗಳ ವೆಚ್ಚದ ಮತ್ತೊಂದು ಯೋಜನೆಯನ್ನು ನನ್ನ ಸರ್ಕಾರ ಕೈಗೆತ್ತಿಕೊಂಡಿದೆ.

40. ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಭಾರತ ಸರ್ಕಾರದಿಂದ ಅತಿ ಶೀಘ್ರದಲ್ಲೇ ಅನುಮೋದನೆ ಸಿಗುವ ನಿರೀಕ್ಷೆ ಇದೆ. ಇದಕ್ಕೆ ಸಂಬಂಧಪಟ್ಟ ಕಾಮಗಾರಿಗಳನ್ನು ನಗರದಲ್ಲಿ ಪೂರ್ಣಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಬೆಂಗಳೂರು ಮಹಾ

ನಗರ ಪಾಲಿಕೆ (ಬಿಎಂಪಿ) ಮೂಲಸೌಕರ್ಯಗಳಿಗೆ ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಜಪಾನ್ ಬ್ಯಾಂಕ್ (ಜೆಬಿಐಸಿ)ನ ನೆರವಿನೊಂದಿಗೆ 3,384 ಕೋಟಿ ರೂಗಳ ವೆಚ್ಚದಲ್ಲಿ ಕಾವೇರಿ ನಾಲ್ಕನೇ ಹಂತ ಎರಡನೇ ಘಟ್ಟದ ಯೋಜನೆಯನ್ನು ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತಲಿನ ಎಂಟು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಲು, ತೆಗೆದುಕೊಂಡಿದೆ. 600 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಸೂಕ್ತ ಚರಂಡಿ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ, ನಗರದಾದ್ಯಂತ ಇರುವ 4 ಪ್ರಮುಖ ಕಣಿವೆಗಳನ್ನು ಪುನರ್‌ವಿನ್ಯಾಸಗೊಳಿಸುವ ಕಾರ್ಯವನ್ನು ಮಹಾ ನಗರ ಪಾಲಿಕೆ ಕೈಗೊಂಡಿದೆ.

41. ನನ್ನ ಸರ್ಕಾರವು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಎಲ್ಲ ವ್ಯಕ್ತಿಗಳು ಆದಷ್ಟು ಅತ್ಯಲ್ಪ ಅವಧಿಯಲ್ಲಿ ವಸತಿ ಸೌಕರ್ಯ ಹೊಂದಲು ಅವರಿಗೆ ನೆರವು ನೀಡುವ ತನ್ನ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಪ್ರಸಕ್ತ ವರ್ಷದಲ್ಲಿ 2.14 ಲಕ್ಷ ಅಪೂರ್ಣಗೊಂಡಿದ್ದ ಮನೆಗಳನ್ನು ನನ್ನ ಸರ್ಕಾರ ಪೂರ್ಣಗೊಳಿಸಿದೆ ಮತ್ತು ಇನ್ನೂ 2.75 ಲಕ್ಷ ಮನೆಗಳನ್ನು ಮಂಜೂರು ಮಾಡಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಇನ್ನೂ ನಾಲ್ಕು ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಗ್ರಾಮ ಪಂಚಾಯಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿವೆ.

42. ನನ್ನ ಸರ್ಕಾರವು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಬಡ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಪಡೆಯುವ ಅವಕಾಶ ಕಲ್ಪಿಸಲು ಬದ್ಧವಾಗಿದೆ. ಈಗಾಗಲೇ ಟೆಲಿ ಮೆಡಿಸಿನ್ ಸೌಲಭ್ಯಗಳನ್ನು ಕಲ್ಪಿಸಲಾಗಿರುವ 13 ಜಿಲ್ಲೆಗಳ ಜೊತೆಗೆ ಇನ್ನೂ 14 ಜಿಲ್ಲೆಗಳಲ್ಲಿ ಟೆಲಿ ಮೆಡಿಸಿನ್ ಜಾಲ ಸ್ಥಾಪಿಸಲು ಉದ್ದೇಶಿಸಲಾಗಿದೆ. ಸಾರ್ವಜನಿಕ–ಖಾಸಗಿ ಪಾಲುಗಾರಿಕೆ ಕುರಿತ ನಮ್ಮ ಕಾರ್ಯತಂತ್ರದ ಭಾಗವಾಗಿ, 69 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಪೂರ್ಣ ನಿರ್ವಹಣೆಯನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಅರ್ಹ ವೈದ್ಯರನ್ನು ಆಕರ್ಷಿಸುವುದಕ್ಕಾಗಿ, ಗುತ್ತಿಗೆ ವೈದ್ಯರುಗಳ ತಿಂಗಳ ಗೌರವಧನವನ್ನು 7,400 ರೂ.ಗಳಿಂದ 11,000 ರೂ.ಗಳಿಗೆ ಹಾಗು ತಜ್ಞ ವೈದ್ಯರುಗಳ ಗೌರವಧನವನ್ನು 10,000 ರೂ.ಗಳಿಂದ 13,000 ರೂ.ಗಳಿಗೆ ಹೆಚ್ಚಿಸಲಾಗಿದೆ.

43. ನನ್ನ ಸರ್ಕಾರವು ಗ್ರಾಮೀಣ ರಸ್ತೆ ವಲಯಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡುತ್ತದೆ. 435 ಗ್ರಾಮೀಣ ರಸ್ತೆಗಳ ಸುಧಾರಣೆಗಾಗಿ ಮತ್ತು 46 ಸೇತುವೆಗಳ ನಿರ್ಮಾಣಕ್ಕಾಗಿ ಪ್ರಸಕ್ತ ವರ್ಷದಲ್ಲಿ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ (ಆರ್‌ಐಡಿಎಫ್) ಯೋಜನೆಯಡಿಯಲ್ಲಿ ಲೋಕೋಪಯೋಗಿ ಇಲಾಖೆಗೆ 225 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಕೆಎಸ್‌ಎಚ್‌ಐಪಿ) ಕಾರ್ಯಕ್ರಮದ ಅಡಿಯಲ್ಲಿ, ಒಟ್ಟು 2,381 ಕಿ.ಮೀ. ಉದ್ದದ ರಸ್ತೆಗಳನ್ನು ಮತ್ತು 300 ಸೇತುವೆಗಳನ್ನು ಸುಧಾರಣೆಗಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಇದುವರೆಗೆ, 1,343 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು 178 ಸೇತುವೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅಲ್ಲದೆ, 366 ಸೇತುವೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

44. ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು 2008ಕ್ಕೆ ಮೊದಲು ಕಾರ್ಯಾಚರಣೆ ನಡೆಸುವಂತೆ ಮಾಡಲು ನನ್ನ ಸರ್ಕಾರವು ಬದ್ಧವಾಗಿದೆ. ಸಮಿಶ್ರ ಸರ್ಕಾರದ ಕಾರ್ಯಾವಧಿಯಲ್ಲೇ ಇದಕ್ಕೆ ಬೇಕಾಗಿದ್ದ ಎಲ್ಲಾ ಅವಶ್ಯಕ ಒಪ್ಪಿಗೆಗಳನ್ನು ಪಡೆಯಲಾಯಿತೆಂದು ನಾನು ತಿಳಿಸಲೇಬೇಕು.

45. ಮಂಗಳೂರು ವಿಮಾನ ನಿಲ್ದಾಣವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸುವುದು ಮತ್ತು ಮೈಸೂರು, ಹಾಸನ ಮತ್ತು ಗುಲ್ಬರ್ಗಗಳಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುವುದಕ್ಕೆ ನನ್ನ ಸರ್ಕಾರವು ಬದ್ಧವಾಗಿದೆ.

46. ಹಾಸನ–ಮಂಗಳೂರು ಗೇಜ್ ಪರಿವರ್ತನೆ ಯೋಜನೆಯನ್ನು ನನ್ನ ಸರ್ಕಾರ ಮತ್ತು ರೈಲ್ವೆ ಮಂತ್ರಾಲಯದ ಜಂಟಿ ಪ್ರಯತ್ನಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಮಾರ್ಗದ ಹಾಸನ–ಸಕಲೇಶಪುರ ಮತ್ತು ಮಂಗಳೂರು–ಸುಬ್ರಮಣ್ಯ ವಿಭಾಗಗಳು ಈಗಾಗಲೇ ಕಾರ್ಯಾರಂಭ ಮಾಡಿವೆ. ಗದಗ–ಸೊಲ್ಲಾಪುರ ಮಾರ್ಗದ ಗೇಜ್ ಪರಿವರ್ತನೆ ಯೋಜನೆಗೆ ಈ ವರ್ಷ 23 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

47. ಕನಿಷ್ಠ ಮಜೂರಿ ಅಧಿನಿಯಮ, 1948ರ ಅನುಸೂಚಿಯಲ್ಲಿ ಪಟ್ಟಿ ಮಾಡಿರುವ 72 ಉದ್ಯೋಗಗಳ ಪೈಕಿ 67 ಉದ್ಯೋಗಗಳಿಗೆ ಸರ್ಕಾರವು ಕನಿಷ್ಠ ಮಜೂರಿಗಳನ್ನು ನಿಗದಿಪಡಿಸಿದೆ. ಈ ವರ್ಷ ಎರಡು ಹೊಸ ಉದ್ಯೋಗಗಳನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಕಟ್ಟಡ ನಿರ್ಮಾಣ ಕೆಲಸಗಾರರ ಸೇವಾ ಷರತ್ತುಗಳ ಷರತ್ತುಗಳನ್ನು ನಿಯಂತ್ರಣ ಮಾಡುವುದಕ್ಕಾಗಿ ಮತ್ತು ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದಕ್ಕಾಗಿ ಒಂದು ಶಾಸನವನ್ನು ಸದ್ಯದಲ್ಲೇ ಜಾರಿಗೆ ತರಲಾಗುವುದು.

48. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಆಲಮಟ್ಟಿ ಆಣೆಕಟ್ಟು ವಿದ್ಯುತ್ ಉತ್ಪಾದನಾ ಕೇಂದ್ರ ಯೋಜನೆಯನ್ನು ಯಾವುದೇ ಹೆಚ್ಚಿನ ಸಮಯ ತೆಗೆದುಕೊಳ್ಳದೆ ಹಾಗೂ ಹೆಚ್ಚಿನ ವೆಚ್ಚದ ಹೊರೆಯಿಲ್ಲದೆ ಪೂರ್ಣಗೊಳಿಸಿದೆ. ಯೋಜನೆಯನ್ನು 674 ಕೋಟಿ ರೂ.ಗಳ ಅಂದಾಜು ವೆಚ್ಚದ ಬದಲಿಗೆ 520 ಕೋಟಿ ರೂ.ಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಹಂತ–1ನ್ನು ತೀವ್ರ ಪ್ರಗತಿಯ ಆಧಾರದ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ವಿದ್ಯುತ್ ಪ್ರಸರಣದಲ್ಲಿ ಉಂಟಾಗುತ್ತಿದ್ದ ನಷ್ಟ (Transmission loss) ವನ್ನು ಇಂಧನ ಇಲಾಖೆಯು ಶೇಕಡ 4.80 ರಿಂದ ಶೇಕಡ 4.18ಕ್ಕೆ ಇಳಿಸಿದೆ ಮತ್ತು ಬೆಂಗಳೂರು ನಗರದಲ್ಲಿ ವಿತರಣಾ ನಷ್ಟವನ್ನು ಶೇಕಡ 16.99 ರಿಂದ ಶೇಕಡ 9.95ಕ್ಕೆ ಇಳಿಸಿದೆ. ಇದನ್ನು ಯೋಜನಾ ಆಯೋಗವು ಪ್ರಶಂಸಿಸಿದೆ. ರಾಜೀವಗಾಂಧಿ ಗ್ರಾಮೀಣ ವಿದ್ಯುತ್ತೀಕರಣ ಯೋಜನೆಯಡಿ ಭಾರತ ಸರ್ಕಾರವು 375 ಕೋಟಿ ರೂ.ಗಳ ಯೋಜನೆಗಳನ್ನು ಮಂಜೂರು ಮಾಡಿದೆ. ರಾಜ್ಯ ಸರ್ಕಾರವು 70,119 ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಿದೆ.

49. ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ಕರ್ನಾಟಕವು ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಶಾಲೆಯನ್ನು ಮಧ್ಯದಲ್ಲೇ ಬಿಡುವ ವಿದ್ಯಾರ್ಥಿಗಳ ಸಂಖ್ಯೆ 11.5 ಲಕ್ಷಗಳಿಂದ 1.1 ಲಕ್ಷಗಳಿಗೆ ಇಳಿಕೆಯಾಗಿದೆ.

50. ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ 421 ಹೊಸ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ ಮತ್ತು 366 ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ನನ್ನ ಸರ್ಕಾರವು 128 ಹೊಸ ಪ್ರಾಥಮಿಕ ಶಾಲೆಗಳನ್ನು ಮತ್ತು 43 ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅನುಕೂಲಕ್ಕಾಗಿ ಪ್ರಾರಂಭಿಸಿದೆ.

51. ಮಕ್ಕಳ ಆರೋಗ್ಯ, ಪೌಷ್ಟಿಕತೆ ಮತ್ತು ಮೂಲಭೂತ ಮಾನವ ಹಕ್ಕುಗಳ ಶೋಷಣೆ ವಿರುದ್ಧ ರಕ್ಷಣೆ ದೊರೆಯುವಂತೆ ಮಾಡುವ ಸಲುವಾಗಿ ಮತ್ತು ಅವರ ಸರ್ವಾಂಗೀಣ ಬೆಳವಣಿಗೆಗಾಗಿ ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಿಸುವುದಕ್ಕಾಗಿ ಮಕ್ಕಳ ಹಕ್ಕುಗಳ ವಿಧೇಯಕ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ವಿಧೇಯಕವನ್ನು ಸಾರ್ವಜನಿಕರ ಚರ್ಚೆಗಾಗಿ ಪ್ರಕಟಿಸಲಾಗಿದೆ ಮತ್ತು ನನ್ನ ಸರ್ಕಾರ ಈ ಸಂಬಂಧವಾಗಿ ಶಾಸನ ರಚಿಸಲು ಬದ್ಧವಾಗಿದೆ.

52. ರಾಜ್ಯದಲ್ಲಿ ಸಾರ್ವಜನಿಕ ಸಾರಿಗೆ ಜಾಲವನ್ನು ಬಲಪಡಿಸುವ ದೃಷ್ಟಿಯಿಂದ ನನ್ನ ಸರ್ಕಾರವು ರಾಜ್ಯದ ಎಲ್ಲಾ ಸಾರಿಗೆ ಸಂಸ್ಥೆಗಳ ಕಾರ್ಯಾಚರಣೆಗಳಲ್ಲಿ ಆಧುನಿಕತೆಯನ್ನು ತರಲು ಮತ್ತು ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಪ್ರೋತ್ಸಾಹ ನೀಡಿದೆ. ಇಡೀ ರಾಷ್ಟ್ರದಲ್ಲಿ ಲಾಭಗಳಿಸುತ್ತಿರುವ ಕೆಲವೇ ಕೆಲವು ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸೇರಿವೆ ಎಂದು ತಿಳಿಸಲು ನನಗೆ ಸಂತಸವೆನಿಸುತ್ತದೆ.

53. ರಾಜ್ಯವು, ಬೃಹತ್, ಭಾರಿ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ವಲಯದಲ್ಲಿ ಸಾಕಷ್ಟು ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುವುದಕ್ಕೆ ಸಮರ್ಥವಾಗಿವೆ. ಮೇಲಿನ ಯೋಜನೆಗಳಲ್ಲಿ 78,000 ಕೋಟಿಗಳಿಗೂ ಹೆಚ್ಚು ಬಂಡವಾಳ ಒಳಗೊಂಡಿದ್ದು, 1,96,124 ವ್ಯಕ್ತಿಗಳಿಗೆ ಉದ್ಯೋಗವನ್ನು ಸೃಜಿಸುತ್ತದೆ. ಸಣ್ಣ ಪ್ರಮಾಣದ ಕೈಗಾರಿಕಾ ವಲಯದಲ್ಲಿ 231.62 ಕೋಟಿ ರೂ.ಗಳ ಬಂಡವಾಳ ಹೂಡಿಕೆಯೊಂದಿಗೆ 7,136 ಘಟಕಗಳನ್ನು ಸ್ಥಾಪಿಸಲಾಗಿದ್ದು, ಅವು 32,229 ಜನರಿಗೆ ಉದ್ಯೋಗ ಒದಗಿಸಿವೆ.

54. ರೂ.21,500 ಕೋಟಿಗಳ ಒಟ್ಟು ಬಂಡವಾಳದ ಒಎನ್‌ಜಿಸಿ/ ಎಂಆರ್‌ಪಿಎಲ್‌ನ ಬೃಹತ್ ಪೆಟ್ರೋ ಕೆಮಿಕಲ್ ಬಂಡವಾಳ ಹೂಡಿಕೆ ಪ್ರಸ್ತಾವವನ್ನು ಅನುಮೋದಿಸುವಲ್ಲಿ ಮಾನ್ಯ ಪ್ರಧಾನಮಂತ್ರಿಯವರು ನೀಡಿರುವ ಬೆಂಬಲಕ್ಕೆ ನನ್ನ ಸರ್ಕಾರ ಆಭಾರಿಯಾಗಿದೆ.

55. ಸಾಮಾನ್ಯವಾಗಿ ಜವಳಿ ಉದ್ಯಮದ, ಹಾಗೂ ನಿರ್ದಿಷ್ಟವಾಗಿ ಬಡ ಕೈಮಗ್ಗ ನೇಕಾರರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಆರೋಗ್ಯ ವಿಮೆ, ಗೃಹ ನಿರ್ಮಾಣ, ಮಾರಾಟ ಪ್ರೋತ್ಸಾಹಕಗಳು ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಪುನರ್‌ರಚನೆಯನ್ನೊಳಗೊಂಡಂಥ ಸಾಮಾಜಿಕ ಭದ್ರತಾ ಯೋಜನೆಗಳೂ ಸೇರಿದಂತೆ ಅಭಿವೃದ್ಧಿ ಯೋಜನೆಗಳ ಒಂದು ವಿಶೇಷ ಪ್ಯಾಕೇಜನ್ನು ಕೈಮಗ್ಗ ನೇಕಾರರಿಗೆ ಘೋಷಿಸಲಾಗಿದೆ. ಪ್ರೋತ್ಸಾಹಿತ ಸಾಲ ಮತ್ತು ಬಾಕಿ ಇರುವ ಸಾಲದ ಮೇಲಿನ ಬಡ್ಡಿ ಹಾಗೂ ಸುಸ್ತಿ ಬಡ್ಡಿ ಮನ್ನಾ ಮತ್ತು ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು, ಇವುಗಳನ್ನು ನೇಕಾರರ ಸಮುದಾಯಕ್ಕೆ ನೀಡಲಾಗುತ್ತಿದೆ.

56. ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ರಚಿಸುವ ಮೂಲಕ ರಾಜ್ಯದ ಜನರ ಮಾನವ ಹಕ್ಕುಗಳ ಸಂರಕ್ಷಣೆಯ ಬಗೆಗಿನ ತನ್ನ ದೃಢವಾದ ಬದ್ಧತೆಯನ್ನು ನನ್ನ ಸರ್ಕಾರ ಪ್ರದರ್ಶಿಸಿದೆ.

57. ನಮ್ಮ ರಾಜ್ಯದಲ್ಲಿ "ಹಸಿವು–ಮುಕ್ತ" ಸಮಾಜವನ್ನು ಸೃಜಿಸುವ ಸಲುವಾಗಿ, ನಿರಾಶ್ರಿತರಿಗೆ, ದೈಹಿಕ ಹಾಗೂ ಮಾನಸಿಕ ಅಸ್ವಸ್ಥರಿಗೆ, ವೃದ್ಧರಿಗೆ ಹಾಗೂ ರೋಗದಿಂದ ನರಳುತ್ತಿರುವವರಿಗೆ ಆಹಾರ ಭದ್ರತೆಯನ್ನು ಒದಗಿಸಲು ಕರ್ನಾಟಕ ಆಹಾರ ಭದ್ರತಾ ಅಧ್ಯಾದೇಶ, 2005ನ್ನು ಜಾರಿಗೊಳಿಸಲಾಗಿದೆ.

58. ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ 14.5 ಲಕ್ಷ ಮೊಕದ್ದಮೆಗಳು ಬಾಕಿ ಉಳಿದಿವೆ. ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳ ಪ್ರಮಾಣವನ್ನು ಕಡಿಮೆ ಮಾಡುವ ದೃಷ್ಟಿಯಿಂದ 90 ಹೊಸ ನ್ಯಾಯಾಲಯಗಳ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ ಮತ್ತು ಬೆಂಗಳೂರು, ಬೆಳಗಾವಿ, ಧಾರವಾಡ, ಗುಲ್ಬರ್ಗ, ಮಂಗಳೂರು ಮತ್ತು ಮೈಸೂರಿನಲ್ಲಿ 6 ಖಾಯಂ ಲೋಕ್ ಅದಾಲತ್‌ಗಳನ್ನು ಸ್ಥಾಪಿಸಲಾಗಿದೆ.

59. ನನ್ನ ಸರ್ಕಾರ ಕಾನೂನು ಮತ್ತು ಸಂಸದೀಯ ಆಚರಣೆಗಳಲ್ಲಿ ಸುಧಾರಣೆ ತರುವ ಉದ್ದೇಶಕ್ಕಾಗಿ ಒಂದು ಸ್ವಾಯತ್ತ ಸಂಸ್ಥೆ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣೆಗಳ ಸಂಸ್ಥೆಯನ್ನು (ಕೆಎಲ್‌ಪಿಎಆರ್) ಸ್ಥಾಪಿಸಿದೆ.

60. ನನ್ನ ಸರ್ಕಾರ ಈ ವರ್ಷ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ (ಐಸಿಡಿಎಸ್) ಅಡಿಯಲ್ಲಿ 11,313 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಿದ್ದು ಅಂಗನವಾಡಿ ಕಾರ್ಯಕರ್ತರ ನೇಮಕಾತಿಯನ್ನು ಸದ್ಯದಲ್ಲೇ ಪೂರ್ಣಗೊಳಿಸಲಿದೆ.

61. ಕಿಶೋರಿ ಶಕ್ತಿ ಯೋಜನೆಯು ಹದಿಹರೆಯದ ಹೆಣ್ಣು ಮಕ್ಕಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗಾಗಿರುವ ಒಂದು ಯೋಜನೆಯಾಗಿದ್ದು, ಪ್ರಸಕ್ತ ವರ್ಷ ಇದರ ವ್ಯಾಪ್ತಿಯನ್ನು ಈಗಿರುವ 38 ಬ್ಲಾಕ್‌ಗಳಿಂದ 185 ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನಾ ಬ್ಲಾಕ್‌ಗಳಿಗೆ ವಿಸ್ತರಿಸಲಾಗಿದೆ.

62. " ಸ್ತ್ರೀ ಶಕ್ತಿ" ಯೋಜನೆಯು ಮಹಿಳೆಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲಗೊಳಿಸುವ ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಗುರಿಹೊಂದಿರುವ ಒಂದು ಯೋಜನೆಯಾಗಿದೆ. ಇದುವರೆಗೆ 15.12 ಲಕ್ಷ ಮಹಿಳೆಯರು 1 ಲಕ್ಷ ಸ್ವ-ಸಹಾಯ ಗುಂಪುಗಳಲ್ಲಿ ಸಂಘಟಿತರಾಗಿದ್ದು, ಆ ಗುಂಪಿನ ಸದಸ್ಯರು ಈವರೆಗೆ 312.53 ಕೋಟಿ ರೂ.ಗಳ ಹಣವನ್ನು ಉಳಿತಾಯ ಮಾಡಿದ್ದಾರೆ. ಆವರ್ತನಿಧಿಯನ್ನು ಎಲ್ಲ ಗುಂಪುಗಳಿಗೆ ನೀಡಲಾಗಿದೆ. ಆದಾಯ ಸೃಜಿಸುವ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಈ ಗುಂಪುಗಳಿಗೆ ಸಹಾಯ ಮಾಡಲು ಬ್ಯಾಂಕುಗಳಿಂದ ಅಗತ್ಯ ಸಾಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

63. ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿ ಮುಂದುವರೆದಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ ಒಂದು ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ತಂತ್ರಜ್ಞಾನ ಪಾರ್ಕನ್ನು ವಿಶೇಷ ಆರ್ಥಿಕ ವಲಯ ಸ್ಥಾನಮಾನದೊಂದಿಗೆ ಸ್ಥಾಪಿಸಲು ನನ್ನ ಸರ್ಕಾರ ಉದ್ದೇಶಿಸಿದೆ. ದ್ವಿತೀಯ ದರ್ಜೆ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಲು ಮಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗಾ, ಬೆಳಗಾವಿ ಮತ್ತು ಶಿವಮೊಗ್ಗಗಳನ್ನು ಬೆಳವಣಿಗೆ ಸಾಮರ್ಥ್ಯವಿರುವ ಕೇಂದ್ರಗಳೆಂದು ಗುರುತಿಸಿದ್ದು, ಈ ನಗರಗಳಲ್ಲಿ ಅರ್ತ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವಿಜ್ಞಾನದ ಸ್ಫೂರ್ತಿಯನ್ನು ಸಾಮಾನ್ಯರಲ್ಲಿ ಪ್ರಸರಿಸಲು ಹಾಗೂ ರಾಜ್ಯದ ನಾಯಕತ್ವವನ್ನು ಪೋಷಿಸಲು ಪ್ರೊ.ಯು.ಆರ್.ರಾವ್‌ರವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ನನ್ನ ಸರ್ಕಾರವು ಸ್ಥಾಪಿಸಿದೆ. ಬೆಂಗಳೂರಿನಲ್ಲಿ ರೂ. 70 ಕೋಟಿಗಳ ವೆಚ್ಚದಲ್ಲಿ ವಿಜ್ಞಾನ ನಗರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಅಲ್ಲದೇ, ನನ್ನ ಸರ್ಕಾರವು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಬಳಿ ಸುಮಾರು 100 ಎಕರೆ ಪ್ರದೇಶದಲ್ಲಿ ಸ್ಟೇಟ್ ಆಫ್ ಆರ್ಟ್ ಬಯೋಟೆಕ್ ಪಾರ್ಕ್‌ನ್ನು ಸ್ಥಾಪಿಸಲು ಕಾರ್ಯವಿಧಾನವನ್ನು ಅಂತಿಮಗೊಳಿಸಿದೆ. ಜನವರಿ, 2007ರ ವೇಳೆಗೆ ಈ ಪಾರ್ಕ್ ಕಾರ್ಯೋನ್ಮುಖವಾಗುವುದೆಂದು ನಿರೀಕ್ಷಿಸಲಾಗಿದೆ.

64. ನನ್ನ ಸರ್ಕಾರವು 2006–07ರ ಸಾಲಿನ ರಾಜ್ಯ ಯೋಜನೆಯನ್ನು ಯೋಜನಾ ಆಯೋಗದೊಂದಿಗೆ ಇತ್ತೀಚೆಗೆ ನನ್ನ ಸರ್ಕಾರವು ಅಂತಿಮಗೊಳಿಸಿದೆ ಎಂದು ಗೌರವಾನ್ವಿತ ಸದಸ್ಯರಿಗೆ ತಿಳಿಸುವುದಕ್ಕೆ ಸಂತೋಷವೆನಿಸುತ್ತದೆ. ಕಾರ್ಯನಿರ್ವಹಣೆ ಹಾಗೂ ಸಂಪನ್ಮೂಲಗಳ ಕ್ರೋಢೀಕರಣದೊಂದಿಗೆ ಈ ಹಿಂದಿನ ಯೋಜನೆಗಳ ಯಶಸ್ವಿ ಅನುಷ್ಠಾನವನ್ನು ಯೋಜನಾ ಆಯೋಗವು ಶ್ಲಾಘಿಸುತ್ತಾ, ರೂ. 16,166 ಕೋಟಿಗಳ ಯೋಜನಾ ಗಾತ್ರಕ್ಕೆ ಅನುಮೋದನೆ ನೀಡಿದೆ. ಇದು ಕಳೆದ ಸಾಲುಗಳ ಯೋಜನಾ ಗಾತ್ರಕ್ಕಿಂತ ಶೇಕಡ 19.26ರಷ್ಟು ಅಧಿಕವಾಗಿದೆ ಹಾಗೂ ಯೋಜನಾ ಆಯೋಗ ಪ್ರಾರಂಭವಾದ ತರುವಾಯ ಇದು ಅತ್ಯಂತ ಅಧಿಕ ಏರಿಕೆಯಾಗಿದೆ.

ಕರ್ನಾಟಕ ರಾಜ್ಯದ ಜನತೆಗೆ ಸೇವೆ ಸಲ್ಲಿಸುವಲ್ಲಿ ನಿಮ್ಮ ಇಚ್ಛೆ ಮತ್ತು ಪ್ರಯತ್ನಗಳಿಗೆ ಯಶಸ್ಸು ಸಿಗಲೆಂದು ನಾನು ಹಾರೈಸುತ್ತೇನೆ.

ಜೈ ಹಿಂದ್
ಜೈ ಕರ್ನಾಟಕ

ಅಧ್ಯಕ್ಷರು : ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಮಂಡಿಸಲಾಯಿತು. ಈಗ ಸದನವನ್ನು 27ನೇ ಜನವರಿ 2006ರ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 3 ಗಂಟೆ 04 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 27 ನೇ ಜನವರಿ 2006ರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)